ದಿನಾಂಕಃ 07.05.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು ದೂರುದಾರರ ಪರ ಶ್ರೀ ಎಂ ಆರ್ ಎಲ್ ವಕೀಲರಿಂದಃ**

ನನಗೆ ದೂರುದಾರರು ಗೊತ್ತು. ದೂರುದಾರರು ಮಿಲ್ , ಬೇಕರಿ ಮತ್ತು ದಿನಸಿ ಅಂಗಡಿಯನ್ನು ಇಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿ ನಾವು ಹಣವನ್ನು ಪಡೆದ ಸಮಯದಲ್ಲಿ ಇಟ್ಟುಕೊಂಡಿರಲಿಲ್ಲ, ಈಗ ಇಟ್ಟುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಯಾವುದಾದರೂ ವ್ಯಕ್ತಿ ಪಿಗ್ಮಿ ಕಟ್ಟಬೇಕೆಂದರೆ ಅವರಿಗೆ ಆದಾಯವಿರಬೇಕೆಂದರೆ ಸರಿ. ಒಬ್ಬ ವ್ಯಕ್ತಿಯ ಅವರವರ ಆದಾಯದ ತಕ್ಕಂತೆ ಪಿಗ್ಮಿಯನ್ನು ಕಟ್ಟುತ್ತಾರೆ ಎಂದರೆ ಸರಿ. ದೂರುದಾರರ ಹೆಂಡತಿ ಅಂಗಡಿಯಲ್ಲಿ ಆರೋಪಿ ಕೆಲಸ ಮಾಡುತ್ತಿದ್ದರು. ಸದರಿ ಅಂಗಡಿ ದೂರುದಾರರ ಅಂಗಡಿ ಎಂದರೆ ಸರಿ. ದೂರುದಾರರೇ ಮಿಲ್ , ಬೇಕರಿ ಮತ್ತು ದಿನಸಿ ಅಂಗಡಿಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ದೂರುದಾರರು ಆರ್ಥಿಕವಾಗಿ ಸಬಲರು ಎಂದರೆ ಸರಿ.

ನಾನು ಆರೋಪಿಯ ಗಂಡ ಎಂದರೆ ಸರಿ. ನಾನು ಪಿಗ್ಮಿ ಏಜೆಂಟಾಗಿ ಕೆಲಸ ಮಾಡುತ್ತಿದ್ದೆ, ಆಗ ಜನರಿಂದ ಹಣವನ್ನು ಪಡೆದು ಸಂಸ್ಥೆಗೆ ನೀಡದೇ ನಾನೇ ಇಟ್ಟುಕೊಂಡು ಪರಾರಿಯಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ರೀತಿ 2-3 ಲಕ್ಷ ಹಣವನ್ನು ತೆಗೆದುಕೊಂಡು ಬೆಂಗಳೂರಿಗೆ ತಲೆಮರೆಸಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆಯಲ್ಲಿರುವ ಅಂಶ ಸತ್ಯವಿರುತ್ತದೆ, ನಾನು ಅದನ್ನು ತಿಳಿದುಕೊಂಡಿರುತ್ತೇನೆ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಬೆಂಗಳೂರಿಗೆ ಕೆಲಸಕ್ಕೆ ಹೋದ ಬಗ್ಗೆ ಹೇಳಿರುತ್ತೇನೆ ಎಂದರೆ ಸರಿ. ನಾನು 2-3 ವರ್ಷ ಬೆಂಗಳೂರಿಗೆ ಹೋದಾಗ ಆರೋಪಿಯೇ ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನೇ ಮನೆಯ ಖರ್ಚನ್ನು ನೋಡಿಕೊಳ್ಳುತ್ತಿದ್ದೆ. ನಾನು ಬೆಂಗಳೂರಿಗೆ ಹೋದಾಗ ಆರೋಪಿ ಮನೆಯ ಖರ್ಚಿಗಾಗಿ ಹಾಗೂ ನಾನು ಮಾಡಿರುವ ಸಾಲವನ್ನು ತೀರಿಸಲು ದೂರುದಾರರ ಬಳಿ ಸಾಲವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿ ನಿಪಿ1 ರಲ್ಲಿರುವ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದಾರೆ ಅದನ್ನು ಈಗಾಗಲೇ ನಿಪಿ1(ಎ) ಎಂದು ಗುರುತಿಸಲಾಗಿದೆ. ನಿಪಿ1 ನನ್ನ ಹೆಂಡತಿಗೆ ಸೇರಿದ ಚೆಕ್ಕು ಎಂದರೆ ಸರಿ. ನಿಪಿ1 ನ್ನು ಆರೋಪಿ ದೂರುದಾರರಿಂದ ಸಾಲವನ್ನು ಪಡೆದ ಬಗ್ಗೆ ಅದನ್ನು ಮರುಪಾವತಿಸಲು ನೀಡಿರುತ್ತಾರೆಂದರೆ

ಸರಿಯಲ್ಲ. ನಿಪಿ1 ನ್ನು ನಗದೀಕರಣಕ್ಕಾಗಿ ಬ್ಯಾಂಕ್ ಗೆ ಹಾಕಿದಾಗ ಸಾಕಷ್ಟು ಹಣವಿಲ್ಲವೆಂದು ಹಿಂಬರಹ ನೀಡಿರುತ್ತಾರೆಂದರೆ ಸರಿ. ನಿಪಿ1 ರ ಚೆಕ್ಕು ಬೌನ್ಸ್ ಆದ ಕಾರಣ ಆರೋಪಿಯ ಮೇಲೆ ದೂರುದಾರರು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ನಿಡಿ1 ರಲ್ಲಿ ಪುಟ್ಟಸ್ವಾಮಿ ನಾಯಕ ಎಂದರೆ ನನ್ನ ಅಣ್ಣ. ನಾನು ಪಿಗ್ಮಿ ಏಜೆಂಟಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ನೀಡಿರುತ್ತೇನೆ. ಸಾಕ್ಷಿಗೆ ತಾನು ಸಲ್ಲಿಸಿರುವ ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿ ಐ ಡಿ ಕಾರ್ಡನ್ನು ಗುರುತಿಸಲು ಹೇಳಿದಾಗ ಇಲ್ಲ ಎಂದು ಉತ್ತರಿಸುತ್ತಾರೆ. ನಿಡಿ1 ರಲ್ಲಿ ಗ್ರಾಹಕರು ಸಹಿ ಮಾಡಿದರೆ ಮಾತ್ರ ಚೆಕ್ಕನ್ನು ನೀಡುತ್ತಾರೆ ಎಂದರೆ ಸರಿ. ನಿಡಿ1 ರಲ್ಲಿಗ್ರಾಹಕರು ಸಹಿ ಮಾಡಿದ ನಂತರ ಸಂಸ್ಥೆಗೆ ನೀಡಿದರೆ ಅವರು ಚೆಕ್ಕನ್ನು ನೀಡುತ್ತಾರೆ ಎಂದರೆ ಸಾಕ್ಷಿ ಬಾಂಡ್ ಸಹ ನೀಡಬೇಕೆಂದು ಉತ್ತರಿಸುತ್ತಾರೆ. ಬಾಂಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ, ಏಕೆಂದರೆ ಸಂಸ್ಥೆಯವರು ಅವರ ಬಳಿ ಇಟ್ಟಿಕೊಂಡಿರುತ್ತಾರೆ ನಮಗೆ ನೀಡುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ1 ರಲ್ಲಿ ಗ್ರಾಹಕರ ಸಹಿ ಎಲ್ಲಾ ಕಲಂಗಳಲ್ಲಿ ಖಾಲಿ ಇದೆ ಎಂದರೆ ಸರಿ. ನಿಡಿ1 ನ್ನು ನಾನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ2 ರಲ್ಲಿ ಕಂಡುಬರುವ ಪ್ರೇಮ ಎನ್ನುವವರು ದೂರುದಾರರ ಹೆಂಡತಿ ಪ್ರೇಮ ಎಂದು ತೋರಿಸಲು ದಾಖಲಾತಿಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಡಿ2 ರಲ್ಲಿ ದಿನಾಂಕದಲ್ಲಿ ತಿಂಗಳು 2 ನ್ನುವ ಸಂಖ್ಯೆಯನ್ನು 3 ಎಂದು ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ನಿಡಿ2 ದಿಃ26.03.2012 ಕ್ಕೆ ಸಂಬಂಧಪಟ್ಟಂತಹ ಚೆಕ್ಕು ಎಂದರೆ ಸರಿ. ಯಾರು ಚೆಕ್ಕನ್ನು ನೀಡಿರುತ್ತಾರೋ ಅವರೇ ತಿದ್ದುಪಡಿ ಮಾಡಬೇಕು ಹಾಗೂ ಅವರೇ ಸಹಿಯನ್ನು ಹಾಕಬೇಕೆಂದರೆ ಸರಿ. ನಿಡಿ2 ರಲ್ಲಿ ಕಂಡುಬರುವ 2 ಸಹಿಗಳು ಬ್ಯಾಂಕ್ ಮ್ಯಾನೇಜರ್ ಮಾಡಿರುವ ಸಹಿಗಳು, ಅವುಗಳನ್ನು ನಿಡಿ2(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಸದರಿ ಮ್ಯಾನೇಜರ್ ಯಾರೆಂದು ನನಗೆ ತಿಳಿದಿದೆ, ಅವರ ಮೇಲೆ ಪ್ರಕರಣ ಹೂಡಲಾಗಿದೆ. ನಾನು ಸಲ್ಲಿಸಿರುವ ದಾಖಲಾತಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ3 ರಲ್ಲಿ ಯಾವುದೇ ಅಧಿಕಾರಿಯ ಸಹಿ ಇಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲ ಎಂದು ಉತ್ತರಿಸುತ್ತಾರೆ. ನಿಡಿ3 ರಲ್ಲಿ ಕೇವಲ ಕಂಪೆನಿಯ ಸೀಲ್ ಇರುತ್ತದೆ, ಸಹಿ ಇರುವುದಿಲ್ಲ ಎಂದರೆ ಸಾಕ್ಷಿ ಕಣ್ ತಪ್ಪಿನಿಂದ ಸಹಿ ಮಾಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. 2012 ರಲ್ಲಿ ಸಂಸ್ಥೆ ಮುಚ್ಚಿಹೋಗಿರುತ್ತದೆ. ನಿಡಿ2 ರ ತರಹ ಯಾವುದಾರೂ ಚೆಕ್ಕನ್ನು ನೀಡಿದ್ದರೆ ಪ್ರೇಮ ಎನ್ನುವವರೇ

ಸಂಸ್ಥೆಯ ಮೇಲೆ ಪ್ರಕರಣವನ್ನು ಹೂಡುತ್ತಿದ್ದರು ಎಂದರೆ ಸಾಕ್ಷಿ ನಾನು ಅದರಲ್ಲಿ ಏಜೆಂಟ್ ಎಂದು ಉತ್ತರಿಸುತ್ತಾರೆ. ನಾನು ಆ ಸಂಸ್ಥೆಯಲ್ಲಿ ಏಜೆಂಟ್ ಆಗಿ ಕೆಲಸ ಮಾಡುತ್ತಿರಲಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಕೆಲವು ದಿನಾಂಕಗಳಂದು ಹಣವನ್ನು ನೀಡಿದ್ದ ಬಗ್ಗೆ ಹೇಳಿರುತ್ತೇನೆ, ಅದು ಈ ಪ್ರಕರಣಕ್ಕೆ ಸಂಬಂಧಪಟ್ಟ ಹಣವಲ್ಲ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಚೆಕ್ಕನ್ನು ನೀಡಿದ ಬಗ್ಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ದೂರು ನೀಡಲು ಯಾವುದೇ ತೊಂದರೆ ಇರಲಿಲ್ಲ. ನಾನು ಈ ಪ್ರಕರಣಕ್ಕಾಗಿ ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಶಾಮೀಲಾಗಿ ದೂರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಮುಖ್ಯವಿಚಾರಣೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗ್ರಾಮದಲ್ಲಿ ಯಾವುದೇ ನ್ಯಾಯಪಂಚಾಯತಿ ನಡೆದಿರುವುದಿಲ್ಲ, ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.